# ಪ್ರಜಾವಾಣಿ

**Tuesday, January 25th, 2011**



ಬೆಂಗಳೂರಿನಲ್ಲಿ ನಡೆಯುತ್ತಿರುವ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೋಮವಾರದ ಪಂದ್ಯದಲ್ಲಿ ಕ್ರೈಸ್ಟ್ ಕಾಲೇಜಿನ ಅಭಾ (ಎಡಬದಿ) ಹಾಗೂ ಜೈನ್ ವಿಶ್ವವಿದ್ಯಾಲಯದ ಸುಜನ್ ಅವರು ಪಾಯಿಂಟ್ ಗಳಿಸಲು ಯತ್ನಿಸಿದ ಕ್ಷಣ.
-ಪ್ರಜಾವಾಣಿ ಚಿತ್ರ

## ಬ್ಯಾಸ್ಕೆಟ್‌ಬಾಲ್: ಕ್ರೈಸ್ಟ್ ಕಾಲೇಜ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕ್ರೈಸ್ಟ್ ಕಾಲೇಜು ತಂಡದವರು ಇಲ್ಲಿ ನಡೆಯುತ್ತಿರುವ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದಲ್ಲಿ ಗೆಲುವು ಪಡೆದರು.

ಮೌಂಟ್ ಕಾರ್ಮೆಲ್ ಕಾಲೇಜು ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಸೋಮವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕ್ರೈಸ್ಟ್ ಕಾಲೇಜು 43-31ರಲ್ಲಿ ಆರ್‌ವಿಸಿಇ ತಂಡವನ್ನು ಮಣಿಸಿತು. ವಿಜಯಿ ತಂಡ ವಿರಾಮದ ವೇಳೆಗಾಗಲೇ 17-14 ರಲ್ಲಿ ಮುನ್ನಡೆ ಗಳಿಸಿತ್ತು. ಕ್ರೈಸ್ಟ್ ಕಾಲೇಜಿನ ಪರ ಆದಿಲ್ (15) ಹಾಗೂ ಮಿನಾಲ್ (11) ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆರ್‌ವಿಸಿಇ ತಂಡದ ಸೂರ್ಯ (18) ಹಾಗೂ ವಿನಯ್ (8) ಗಳಿಸಿ ಗಮನ ಸೆಳೆದರು.

ಇದೇ ವಿಭಾಗದ ಇನ್ನೊಂದು ಪಂದ್ಯದಲ್ಲಿ ಎಸ್‌ಜೆಸಿಇ 67-54ರಲ್ಲಿ ಎಂಎಸ್‌ಆರ್‌ಐಟಿ ಮೇಲೆ ಜಯ ಸಾಧಿಸಿತು. ವಿಜಯಿ ತಂಡದ ಅರವಿಂದ್ (18), ವರುಣ್ (16) ಹಾಗೂ ಎದುರಾಳಿ ತಂಡದ ಅನಂತ್ (18), ಅನಂದ್ ಜಾಹಾ (10) ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಸತ್ಯಭಾಮಾ ಕಾಲೇಜು 43-10ರಲ್ಲಿ ಆರ್‌ಎನ್‌ಎಸ್‌ಟಿ ವಿರುದ್ಧ ಗೆಲುವು ಪಡೆಯಿತು.

ಇದಕ್ಕೂ ಮುನ್ನ ನಡೆದ ಪುರುಷರ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸತ್ಯಭಾಮ ಕಾಲೇಜು 60-49ರಲ್ಲಿ ಸಿಎಂಆರ್‌ಐಎಂಎಸ್ ಮೇಲೂ, ಕ್ರೈಸ್ಟ್ ಕಾಲೇಜು 77-72ರಲ್ಲಿ ಎಸ್‌ಬಿಎಂಜೆಸಿ ವಿರುದ್ಧವೂ, ಆರ್‌ಎನ್‌ಎಸ್‌ಐಟಿ 44-26ರಲ್ಲಿ ಗಾರ್ಡನ್ ಸಿಟಿ ಕಾಲೇಜಿನ ಮೇಲೂ ಜಯ ಸಾಧಿಸಿತು.

ಫೈನಲ್‌ಗೆ ಎಂಸಿಸಿ: ಸ್ವಾತಿ (10) ಹಾಗೂ ಮೋನಿಕಾ (8) ಅವರ ಉತ್ತಮ ಆಟದ ನೆರವಿನಿಂದ ಎಂಸಿಸಿ ತಂಡದವರು ಇದೇ ಟೂರ್ನಿಯ ಮಹಿಳೆಯರ ವಿಭಾಗದಲ್ಲಿ ಫೈನಲ್‌ಗೆ ಪ್ರವೇಶಿದರು.

ಸೋಮವಾರ ನಡೆದ ಸೆಮಿ ಫೈನಲ್ ಪಂದ್ಯದಲ್ಲಿ ಎಂಸಿಸಿ 38-20ರಲ್ಲಿ ಜೆಎನ್‌ಸಿ ತಂಡವನ್ನು ಪರಾಭವಗೊಳಿಸಿತು. ವಿರಾಮದ ವೇಳೆಗೆ 32-7ರಲ್ಲಿ ಭಾರಿ ಅಂತರದ ಮುನ್ನಡೆ ಸಾಧಿಸಿದ್ದ ಎಂಸಿಸಿ ಸುಲಭವಾಗಿ ಗೆಲುವನ್ನು ತನ್ನದಾಗಿಸಿಕೊಂಡಿತು. ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಎಸ್‌ಬಿಎಂಜೆಸಿ 32-26ರಲ್ಲಿ ಎಸ್‌ಜೆಸಿಸಿ ತಂಡವನ್ನು ಮಣಿಸಿ ಫೈನಲ್‌ಗೆ ಪ್ರವೇಶ ಪಡೆಯಿತು. ವಿಜಯಿ ತಂಡದ ಸಿಮೋನೆಲ್ಲಾ (12) ಹಾಗೂ ಅನುಷಾ (8) ಉತ್ತಮ ಆಟವಾಡಿದರು.